**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

***Spl.C.No.119/2018***

PW.13
CW.18

ದಿನಾಂಕಃ 29-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಹೆಸರುಃ ಎಂ.ಗಂಗಾಧರ
ತಂದೆಯ ಹೆಸರುಃ ಮಂಜಯ್ಯ
ವಯಸ್ಸು 52 ವರ್ಷ
ವೃತ್ತಿಃ ಎಇಇ, ಶಿರಾ
ವಾಸಸ್ಥಳಃ ತುಮಕೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ರಿಂದ ನವೆಂಬರ್ 2021 ರವರೆಗೆ ನಾನು ಮಧುಗಿರಿ ಲೋಕೋಪಯೋಗಿ ಇಲಾಖೆಯಲ್ಲಿ ಎಇ ಅಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ನನಗೆ ಮಧುಗಿರಿ ಉಪವಿಭಾಗದ ಅರಕ್ಷಕ ಉಪಾಧೀಕ್ಷಕರಿಂದ ಕೃತ್ಯ ನಡೆದ ಸ್ಥಳಕ್ಕೆ ಸಂಬಂದಿಸಿದಂತೆ ನಕ್ಷೆ ತಯಾರಿಸಿಕೊಡುವಂತೆ ಮನವಿ ಪತ್ರ ದಿನಾಂಕಃ 29-12-2017 ರಂದು ನಮ್ಮ ಕಚೇರಿಯಲ್ಲಿ ಸ್ವೀಕರಿಸಿದ್ದರು, ನಮ್ಮ ಕಚೇರಿಯ ಹಿರಿಯ ಅಧಿಕಾರಿಗಳು

ಸದರಿ ಮನವಿ ಪತ್ರವನ್ನು ನನಗೆ ಮೌಖಿಕ ಸೂಚನೆಯೊಂದಿಗೆ ನೀಡಿ ಸ್ಥಳಕ್ಕೆ ಬೇಟಿ ನೀಡಿ ನಕ್ಷೆ ತಯಾರಿಸುವಂತೆ ತಿಳಿಸಿದ್ದರು.

3. ದಿನಾಂಕಃ 19-1-2018 ರಂದು ಚಾಸಾಃ 27 ಪಿ.ಎಸ್.ಐ ಪಾಲಾಕ್ಷ ಪ್ರಭು ರವರು ಕೃತ್ಯ ನಡೆದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಸ್ಥಳ ತೋರಿಸಿದರು. ಮಧುಗಿರಿಯ ದಂಡಿನಮಾರಮ್ಮನ ದೇವಸ್ಥಾನದ ಮುಂಬಾಗದಲ್ಲಿ ಹೊಸದಾಗಿ ನಿರ್ಮಾಣ ಮಾಡಿರುವ ರಿಂಗ್ ರಸ್ತೆಯಲ್ಲಿ ಕೃತ್ಯ ನಡೆದ ಸ್ಥಳ ತೋರಿಸಿದ್ದು ಸದರಿ ಸ್ಥಳದಲ್ಲಿ ನಾನು ಪರಿಶೀಲನೆ ಮಾಡಿ ನಕ್ಷೆ ತಯಾರಿಸಿದ್ದೆ. ನಕ್ಷೆಯನ್ನು ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದ್ದೆ. ನಂತರ ನನ್ನ ಹಿರಿಯ ಅಧಿಕಾರಿಗಳು ಡಿವೈ.ಎಸ್.ಪಿ ರವರೊಂದಿಗೆ ನಕ್ಷೆಯನ್ನು ನೀಡಿದ್ದರು. ಸಾಕ್ಷಿ ತಾನು ತಯಾರು ಮಾಡಿದ ನಕ್ಷೆ ಮತ್ತು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಕ್ಷೆಯನ್ನು ನಿಪಿ.15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಕೊಲೆ ನಡೆದಿತ್ತು ಎಂದು ನನಗೆ ಚಾಸಾಃ 27 ನಕ್ಷೆ ತಯಾರಿಸುವ ವೇಳೆ ಹೇಳಿದ್ದರು. ತುಮಕೂರಿನಿಂದ ಪಾವಗಡಕ್ಕೆ ಹೋಗುವ ರಸ್ತೆಯ ಬಲಬಾಗದಲ್ಲಿ ಬ್ಯಾರಿಕೇಡ್ ಅಳವಡಿಸಿದ್ದ (ಸ್ಟ್ಯಾಟಿಕ್ ಬ್ಯಾರಿಕೇಡ್) ಕೊಲೆ ನಡೆದ ಸ್ಥಳ ಎಂದು ತೋರಿಸಿದರು. ಸದರಿ ರಸ್ತೆ ಅಗಲ 11.5 ಇತ್ತು. ಸದರಿ ರಸ್ತೆಯ ಎಡಬಾಗದಲ್ಲಿ 32.47 ಮೀಟರ್ ಅಂತರದಲ್ಲಿ ಒಂದು ಕಲ್ಲು ಕಟ್ಟಡದ ಬಾವಿ ಇತ್ತು. ಸದರಿ ಬಾವಿಯಲ್ಲಿ ಶವ ದೊರೆತಿತ್ತು ಎಂದು ಚಾಸಾಃ 27 ನಕ್ಷೆ ತಯಾರು ಮಾಡುವ ವೇಳೆ ಮಾಹಿತಿ ನೀಡಿದರು. ಕಲ್ಲು ಕಟ್ಟಡದ ಬಾವಿಯ ಪಕ್ಕ ಒಂದು ಪಂಪ್ ಹೌಸ್ ಇತ್ತು.

**ಪಾಟೀ ಸವಾಲು 1 ರಿಂದ 3 ನೇ ಆರೋಪಿಗಳ ಪರಃ** ಶ್ರೀ.ಅರ್.ವಿ.ಡಿ ವಕೀಲರಿಂದ

4. ನಿಪಿ.15 ನ್ನು ಯಾವ ಮಾಪನದಲ್ಲಿ ತಯಾರು ಮಾಡಿದ್ದೆ ಎಂದು ನಿಪಿ.15 ರಲ್ಲಿ ನಮೂದು ಮಾಡಿಲ್ಲ. ನಿಪಿ.15 ರಲ್ಲಿ ದಂಡಿನಮಾರಮ್ಮನ ದೇವಸ್ಥಾನದ ಮುಂಬಾಗ ಎಂದು ಬರೆದಿಲ್ಲ. ನಕ್ಷೆಯಲ್ಲಿ ರಸ್ತೆ 11.5 ಎಂದು ನಮೂದು ಮಾಡಿರುತ್ತೇನೆ. ಅದರೆ ಮೀಟರ್ ಎಂದು ನಮೂದು ಮಾಡಿಲ್ಲ. ಚೋಳೇನಹಳ್ಳಿ ಗ್ರಾಮದ ಸ.ನಂ.46/3 ಕ್ಕೆ ಸಂಬಂದಿಸಿದಂತೆ ನಕ್ಷೆ ತಯಾರು ಮಾಡುವ ಮೊದಲು ದಾಖಲೆ ನೋಡಿಲ್ಲ.

5. ಸ.ನಂ. 46/3 ಎಂದು ಪೊಲೀಸರು ಮಾಹಿತಿ ನೀಡಿದ್ದರು. ವ್ಯಕ್ತಿಯ ಶವದೊರೆತ ಜಾಗ ಎಂದು ನಮೂದು ಮಾಡಿದ ಸ್ಥಳದಲ್ಲಿ ನಾನು ವಿಶೇಷ ಗುರುತು ಮಾಡಿಲ್ಲ. ನಾನು ಬೇಟಿ ನೀಡಿದ ಸ್ಥಳದಲ್ಲಿ ಟೇಪ್ ನಿಂದ ಅಳತೆ ಮಾಡಿ ಅಳತೆ ನಮೂದು ಮಾಡಿಕೊಂಡು ನಂತರ ನನ್ನ ಕಚೇರಿಯಲ್ಲಿ ನಿಪಿ.15 ನಕ್ಷೆಯನ್ನು ತಯಾರು ಮಾಡಿದ್ದೇನೆ. ನಾನು ಸ್ಥಳಕ್ಕೆ ಬೇಟಿ ನೀಡಿದಾಗ ನನ್ನ ನೋಟ್ಸ್ ನಲ್ಲಿ ಕಚ್ಚಾ ನಕ್ಷೆಯನ್ನು ಬರವಣಿಗೆ ಮಾಡಿಕೊಂಡಿದ್ದೆ. ನಾನು ಚಾಸಾಃ 27 ರವರೊಂದಿಗೆ ನಿಪಿ.15 ರ ಸ್ಥಳಕ್ಕೆ ಬೇಟಿ ನೀಡಿರಲಿಲ್ಲ ಮತ್ತು ಚಾಸಾಃ 27 ನನಗೆ ಸ್ಥಳ ತೋರಿಸಿರಲಿಲ್ಲ ನಾನು ಸ್ಥಳದಲ್ಲಿ ಕಚ್ಚಾ ನಕ್ಷೆ ತಯಾರು ಮಾಡಿರಲಿಲ್ಲ ಟೇಪ್ ಸಹಾಯದಿಂದ ಅಳತೆ ಮಾಡಿರಲಿಲ್ಲ ಕಚೇರಿಯಲ್ಲಿ ಕುಳಿತು ನಿಪಿ.15 ನ್ನು ಪೊಲೀಸರ ಕೋರಿಕೆಯ ಮೇರೆಗೆ ತಯಾರು ಮಾಡಿದ್ದೆ ಎಂದರೆ ಸರಿಯಲ್ಲ. ನಿಪಿ.15 ನ್ನು ತಯಾರು ಮಾಡಿದ ದಿನಾಂಕವನ್ನು ನಾನು ನಕ್ಷೆಯಲ್ಲಿ ನಮೂದು ಮಾಡಿಲ್ಲ. ಸಾಕ್ಷಿ ಮುಂದುವರಿದು ಸ್ಥಳಕ್ಕೆ ಬೇಟಿ ನೀಡಿದ ದಿನವೇ ನಕ್ಷೆ ತಯಾರು ಮಾಡಿದ್ದಾಗಿ ನುಡಿಯುತ್ತಾರೆ. ನಾನು

ಸ್ಥಳದಲ್ಲಿ ಯಾವುದೇ ಕಚ್ಚಾ ನಕ್ಷೆ ನನ್ನ ನೋಟ್ ಬುಕ್ ನಲ್ಲಿ ತಯಾರು ಮಾಡಿರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 4 ನೇ ಆರೋಪಿಗಳ ಪರಃ** ಶ್ರೀ.ಎಸ್.ಕೆ.ಎಂ ವಕೀಲರಿಂದ

1 ರಿಂದ 3 ನೇ ಅರೋಪಿಗಳ ಪರ ವಕೀಲರ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ನುಡಿದಿದ್ದು ಅನುಮೋದಿಸಲಾಯಿತು.

**ಪಾಟೀ ಸವಾಲು 5 ನೇ ಆರೋಪಿಗಳ ಪರಃ** ಶ್ರೀ.ಎಸ್.ಎನ್ .ಅರ್ ವಕೀಲರಿಂದ

ನಾನು ಸ್ಥಳಕ್ಕೆ ಬೇಟಿ ನೀಡದೇ ಪೊಲೀಸರ ಕೋರಿಕೆಯ ಮೇರೆಗೆ ನಿಪಿ.15 ನ್ನು ಸುಳ್ಳು ನಕ್ಷೆ ತಯಾರು ಮಾಡಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.